(ಇಂದು ದಿನಾಂಕ:15-12-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀಸವಾಲು: ಪ್ರತಿವಾದಿಯರ ಪರ ವಕೀಲರಿಂದ:**

1. ಕಳೆದ 35 ವರ್ಷಗಳಿಂದ ನಾನು 1 ನೇ ದರ್ಜೆಯ ಗುತ್ತಿಗೆದಾರರ ಅಂತಾ ಕೆಲಸ ಮಾಡುತ್ತಿದ್ದೇನೆ. ಕಳೆದ 35 ವರ್ಷಗಳಿಂದ ನಾನು ನನ್ನ ಕುಟುಂಬದ ಯಜಮಾನಿಕೆ ಮಾಡುತ್ತಿದ್ದೇನೆ. ನನಗೆ ಒಂದು ಹೆಣ್ಣು ಮಗಳು, ಮಗಳ ಮದುವೆ ಆಗಿರುತ್ತದೆ. ಒಂದು ಗಂಡು ಮಗ ಗುತ್ತಿಗೆದಾರ ಇರುತ್ತಾನೆ. ನನ್ನ ಮಗನ ಜೊತೆ ನಾನು ಒಳ್ಳೆಯ ಸಂಬಂಧ ಈಗಲೂ ಹೊಂದಿದ್ದೇನೆ. ಇಬ್ಬರು ಸೇರಿ ವ್ಯವಹಾರ ಮಾಡುತ್ತೇವೆ. ನನಗೆ ಯಾವುದೇ ಕೆಟ್ಟ ಹವ್ಯಾಸ ಇಲ್ಲ.
2. ಸಾಮಾನ್ಯವಾಗಿ ಸಾಲ ಕೊಡುವ ಸಂದರ್ಭದಲ್ಲಿ ಪ್ರಾಮಿಸರಿ ನೋಟ ಅಥವಾ ಅಡಮಾನ ಪತ್ರ ಬರೆದುಕೊಡಲಾಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಖರೀದಿ ಕರಾರು ಪತ್ರವನ್ನು ಸಹ ಬರೆದುಕೊಡುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ನಾನು ಪಿತ್ರಾರ್ಜಿ ಆಸ್ತಿಯನ್ನು

ಮಾರಾಟ ಮಾಡಿ ಬಂದ ಹಣದಿಂದ ಖರೀದಿ ಮಾಡಿದ್ದೇನೆ. ಯಾವ ಆಸ್ತಿಯನ್ನು ಯಾವ ದಿನಾಂಕದಂದು, ಯಾರಿಗೆ, ಎಷ್ಟು ಎಕರೆ, ಎಷ್ಟು ಮೊತ್ತಕ್ಕೆ ಮಾರಾಟ ಮಾಡಿರುತ್ತೇನೆ ಅಂತಾ ನನ್ನ ಲಿಖಿತ ಹೇಳಿಕೆಯಲ್ಲಿ ಬರೆಸಿದ್ದೇನೋ ಇಲ್ಲವೋ ನನಗೆ ನೆನಪಿಲ್ಲ. ದಾವೆಯಲ್ಲಿ ಬರೆಯಿಸಿದ ಸಂಗತಿಗಳ ಬಗ್ಗೆ, ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮತ್ತು ನನ್ನ ಪ್ರತಿವಾದ ಪತ್ರದಲ್ಲಿ ಬರೆದ ಅಂಶಗಳ ಬಗ್ಗೆ ನನಗೆ ನೆನಪಿಲ್ಲ ಆದರೆ ಮಾಹಿತಿ ಇದೆ.

3. ಬೇರೆ ಆಸ್ತಿಗಳಿಗೆ ಸಂಬಂಧಪಟ್ಟಂತೆ ಭಾಗ ಬೇಕು ಅಂತಾ ನನ್ನ ಮಗ ಮತ್ತು ಮಗಳು ದಾವೆಯನ್ನು ನನ್ನ ವಿರುದ್ದ ಸಲ್ಲಿಸಿದ್ದಾರೆ. ಅದಕ್ಕೆ ಸಂಬಂದಪಟ್ಟ ದಾಖಲೆಗಳನ್ನು ನಾನು ಈ ಪ್ರಕರಣದಲ್ಲಿ ಸಲ್ಲಿಸಿಲ್ಲ. ಬೇರೆ ಆಸ್ತಿಗಳಿಗೆ ಸಂಬಂಧಪಟ್ಟಂತೆ ಭಾಗ ಬೇಕು ಅಂತಾ ನನ್ನ ಮಗ ಮತ್ತು ಮಗಳು ದಾವೆಯನ್ನು ನನ್ನ ವಿರುದ್ದ ಸಲ್ಲಿಸಿದ್ದಾರೆ, ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮತ್ತು ನನ್ನ ಪ್ರತಿವಾದ ಪತ್ರದಲ್ಲಿ ಉಲ್ಲೇಖಿಸಿಲ್ಲ. ಬೇರೆ ಆಸ್ತಿಗಳಿಗೆ ಸಂಬಂಧಪಟ್ಟಂತೆ ಭಾಗ ಬೇಕು ಅಂತಾ ನನ್ನ ಮಗ ಮತ್ತು ಮಗಳು ದಾವೆಯನ್ನು ನನ್ನ ವಿರುದ್ದ ಸಲ್ಲಿಸಿದ ದಾವೆ ಸಂಖ್ಯೆ ನೆನಪಿಲ್ಲ, ಆದರೆ ದಾವೆಯು ಇದೇ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದೆ. ನನ್ನ ಹಣಕಾಸಿನ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಮತ್ತು ಗುತ್ತಿಗೆದಾರ ಕೆಲಸ ನಿರ್ವಹಣೆಗೆ ಸಂಬಂಧಪಟ್ಟಂತೆ ನಾನು ಡೈರಿ ನಿರ್ವಹಣೆ ಮಾಡಿದ ಬಗ್ಗೆ ನನಗೆ ನೆನಪಿಲ್ಲ.

4. ನಾನು ಕಳೆದ 35 ವರ್ಷಗಳಿಂದ ಯಾವುದೇ ದಾಖಲೆ ಮೇಲೆ ಸಹಿ ಮಾಡುವಾಗ ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ವಾದಿಯಿಂದ ನನಗೆ ಲಿಗಲ್ ನೋಟೀಸ ಬಂದಿಲ್ಲ. ದಾವೆ ಹಾಕಿದ ನಂತರ ನಮ್ಮ ಮನೆಗೆ ಸಮನ್ಸ್ ಬಂದ ನಂತರ ನಾನು ಪಂಚಾಯತಿ ಮಾಡಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮತ್ತು ನನ್ನ ಪ್ರತಿವಾದ ಪತ್ರದಲ್ಲಿ ಚೆಕ್ ವಿವರಗಳನ್ನು ಹೇಳಿ ಬರೆಯಿಸಿದ್ದೇನೆ. ದಿಃ 30-11-2015 ರಂದು ನಾನು ಎಷ್ಟು ಸಾಲದ ಹಣ ಕಟ್ಟಿದ್ದೆ ಅಂತಾ ನನಗೆ ನೆನಪಿಲ್ಲ. ಅದರ ಪೈಕಿ ಅಸಲು ಎಷ್ಟು ಮತ್ತು ಬಡ್ಡಿ ಎಷ್ಟು ಅಂತಾ ಅದು ಕೂಡಾ ಸದ್ಯಕ್ಕೆ ನೆನಪಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮತ್ತು ನನ್ನ ಪ್ರತಿವಾದ

ಪತ್ರದಲ್ಲಿ ಇಂತಹ ಸ್ಥಳದಲ್ಲಿ ಇಂತಹವರ ಸಾಕ್ಷಿದಾರರ ಸಮಕ್ಷಮ ಹಣ ಕೊಟ್ಟಿದ್ದೇನೆ ಅಂತಾ ಬರೆಸಿರುವುದಿಲ್ಲ. ಸಂಪೂರ್ಣ ಹಣ ಪಾವತಿ ಮಾಡಲಾಗಿದೆ, ಕಾರಣ ಕರಾರು ಪತ್ರವನ್ನು ರದ್ದು ಮಾಡಿ ಅಂತಾ ನಾನು ವಾದಿಗೆ ನೋಟೀಸ್ ಕೊಟ್ಟಿಲ್ಲ.

5. ಇಂದಿನವರೆಗೂ ನಾನು ಕರಾರು ಪತ್ರದ ರದ್ದತಿ ಕುರಿತು ಪಂಚಾಯತಿ ಮಾಡಿಲ್ಲ. ಆದರೆ ಮೌಖಿಕವಾಗಿ ಹೇಳಿದ್ದೇನೆ. ದಿಃ 30-11-2015 ರಂದು ನಾನು ವಾದಿಗೆ ಹಣವನ್ನು ವಾಪಸ ಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ನಾನು ಹಣ ಕೊಟ್ಟಿದ್ದು ನಿಜ ಆಗಿದ್ದರೆ ನಾನು ಅವರಿಗೆ ನೋಟೀಸ್ ಕೊಡುತ್ತಿದ್ದೆ ಎಂದರೆ ಸರಿಯಲ್ಲ. 30-11-2015 ರಂದು ನಾನು ವಾದಿಗೆ ಹಣವನ್ನು ವಾಪಸ ಕೊಟ್ಟಿರುತ್ತೇನೆ ಎಂದು ತೋರಿಸಲು ನಾನು ದಾಖಲೆಗಳನ್ನು ಸಲ್ಲಿಸಿದ ಬಗ್ಗೆ ನನಗೆ ನೆನಪಿಲ್ಲ. ನನಗೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನನಗೆ ಸಮನ್ಸ್ ಬಂದ ನಂತರ ನಾನು ವಾದಿಗೆ ಭೇಟಿಯಾಗಿಲ್ಲ.

6. ನನ್ನ ವಿಳಾಸ. ಎಮ್ ರಾಮಕೋಟೇಶ್ವರರಾವ್ ತಂದೆ ಎಮ್ ವಿರರಾಜೂ, ಸಾಃ ಸಾಯಿ ನಿಲಯ ಆರ್ ಕೆ ಟವರ್ಸ್ ಎದುರುಗಡೆ, ಸಾಯಿಬಾಬಾ ದೇವಸ್ಥಾನ ಹಿಂದುಗಡೆ ಆದರ್ಶ ಕಾಲೋನಿ , ಸಿಂಧನೂರು ಎಂದರೆ ಸರಿ. ಗೋಮರ್ಸಿ ಗ್ರಾಮದ ಸರ್ವೇ ನಂ. 68/*/5 ಕ್ಷೇತ್ರ 4 ಎಕರೆ 14 ಗುಂಟೆ ಪೈಕಿ 14 ಗುಂಟೆ ಪೋಟ ಖರಾಬ ಜಮೀನು ಎಂದರೆ ಸರಿ. ದಾವಾ ಶೆಡ್ಯೂಲ್‌ನಲ್ಲಿ ತೋರಿಸಿದ ಚಕಬಂದಿ ನಿಜ ಇರುತ್ತದೆ. ಅಕ್ಟೋಬರ್-2015 ಮೊದಲನೇ ವಾರದಲ್ಲಿ ವಾದಿಗೆ ನಾನು ಭೇಟಿಯಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡುವ ಇಚ್ಚೆಯಿಂದ ಭೇಟಿಯಾಗಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಾಲ ಪಡೆಯಲು ಭೇಟಿಯಾಗಿದ್ದೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ರೂ.15,80,000/- ಗಳಿಗೆ ಮಾತುಕತೆ ಆಯಿತು ಎಂದರೆ ಸರಿಯಲ್ಲ. ಮುಂಗಡ ಹಣ ರೂ.5 ಲಕ್ಷ ನಾನು ಪಡೆದು ನೋಂದಣಿ ಖರೀದಿ ಕರಾರು ಪತ್ರ ನಾನು ವಾದಿ ಪತ್ರ ಬರೆದುಕೊಟ್ಟೆ ಎಂದರೆ ಸರಿಯಲ್ಲ.

7. ನಾನು ವಾದಿಯರಿಗೆ ಕರಾರು ಪತ್ರ ಬರೆದುಕೊಟ್ಟು ಅದರ ಮೇಲಿರುವ ಸಹಿ ನನ್ನದೇ ಇರುತ್ತದೆ. ವಾದಿಯರು ನನಗೆ ಕರಾರು ಪತ್ರ ಆದ 10 ದಿನಗಳ ನಂತರ ರೂ.3 ಲಕ್ಷ ಮಾತ್ರ ಕೊಟ್ಟಿದ್ದಾರೆ. ಆ ವ್ಯವಹಾರಕ್ಕೂ ಮತ್ತು ಪ್ರಸ್ತುತ ದಾವೆಯ ವ್ಯವಹಾರಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಜಮೀನಿಗೆ ಕರೆದುಕೊಂಡು ಹೋಗಿ ಜಮೀನು ತೋರಿಸಿದ ನಂತರ ವ್ಯವಹಾರ ಆಗಿದೆ ಎಂದರೆ ಸರಿಯಲ್ಲ. ವಾದಿಯರು ಉಳಿದ ರೂ.1,80,000/- ಹಣದ ಜೊತೆಗೆ ನನಗೆ ಅನೇಕ ಬಾರಿ ಭೇಟಿ ಯಾಗಿ ನನಗೆ ನೊಂದಣಿ ಖರೀದಿ ಪತ್ರ ಬರೆದುಕೊಡಿ ಅಂತಾ ವಿನಂತಿಸುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ,

8. ಈಗ ದಾವಾ ಆಸ್ತಿಯ ಬೆಲೆ ಜಾಸ್ತಿ ಆಗಿದೆ ಎಂದರೆ ಸರಿ. ಈಗ ದಾವಾ ಆಸ್ತಿಯ ಬೆಲೆ ಜಾಸ್ತಿ ಆಗಿದೆ ಕಾರಣ ಹೇಗಾದರೂ ಮಾಡಿ ದಾವಾ ಆಸ್ತಿಯನ್ನು ಉಳಿಸಿಕೊಳ್ಳಲು ಕಟ್ಟುಕತೆ ಕಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ದಾಖಲೆಗಳು ವಾದಿಗೆ ಸಂಬಂಧಪಟ್ಟ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ನಾನು ಕೆಲವು ಜನರಿಂದ ದುಡ್ಡು ಪಡೆದು ಖರೀದಿ ಕರಾರು ಪತ್ರ ನೊಂದಣಿ ಮಾಡಿ ನಂತರ ಕಾಲಹರಣ ಮಾಡಿ ಈ ರೀತಿ ಜನರಿಗೆ ಸತಾಯಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮತ್ತು ನನ್ನ ಪ್ರತಿವಾದ ಪತ್ರದಲ್ಲಿ ಬರೆದ ಅಂಶಗಳು ಎಲ್ಲ ಸುಳ್ಳು ಇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು